ಅಧ್ಯಕ್ಷರು:- ಅಲ್ಲ; ನಾನೇ ಈ ಮೊದಲು ಹೈಕೋರ್ಟಿನ ಆದೇಶಗಳನ್ನೆಲ್ಲ ಒಳಗೊಂಡಂಥ ಒಂದು ದೀರ್ಘವಾದಂಥ ಪತ್ರವನ್ನೇ ಬರೆದಿದ್ದೇನೆ. ನಿಮ್ಮ ರೆವಿನ್ಯೂ ಇಲಾಖೆಯ ಜೊತೆಗೆ ನಾನೇ ವ್ಯವಹಾರ ಮಾಡಿದ್ದೇನೆ. ಅವರಿಗೆ ಎಲ್ಲಾ ವಯಸ್ಸಾಗಿ ಬಿಟ್ಟಿದೆ.

SRI M.C. NANAIAH:- Sri, I give this assurance. One copy of the Judgment I myself will take and make a reference to the Revenue Department and see that all such cases are settled.

M.R. SPEAKER:- Thank you very much.

(ಈ) ಕೊಯಮತ್ತೂರಿನಲ್ಲಿ ನಡೆದು ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಆರೋಪಿಗಳ ಬಂಧನ,

+ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಸನ್ಮಾನ್ಯ ಅಧ್ಯಕ್ಷರೇ, ನಡೆದಂಥ ಬಾಂಬ್ ಸ್ಫೋಟದಲ್ಲಿ ಸುಮಾರು 60ಕ್ಕಿಂತಲೂ ಹೆಚ್ಚು ಜನರು ಮೃತಪಟ್ಟಂಥಾದ್ದು ಈ ದೇಶದ ಒಂದು ದೊಡ್ಡ ದುರ್ಘಟನೆ. ಇದಕ್ಕೆ ಸಂಬಂಧಪಟ್ಟಹಾಗೆ, ಈ ಬಾಂಬ್ ಎಲ್ಲಿ ತಯಾರಾಗಿತ್ತು ಎನ್ನುವುದರ ಬಗ್ಗೆ ತಮಿಳುನಾಡಿನ ಪೋಲೀಸರಿಂದ ಒಂದು ಸಂಶೋಧನೆಯ ಕೆಲಸ ಪ್ರಾರಂಭವಾಯಿತು. ಈ ದಿಸೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಈ ಎರಡು ನಗರಗಳಲ್ಲಿ ಈ ಬಾಂಬ್‌ನ್ನು ತಯಾರು ಮಾಡಿದಂಥ 5 ಸ್ಥಳಗಳಮೇಲೆ ಪೋಲೀಸರು ತಮಿಳುನಾಡಿನಿಂದ ಬಂದು ರೈಡ್ ಮಾಡಿದರು. ಅದರಲ್ಲಿ ಮೂರು ಜನಗಳನ್ನು ಬಂಧಿಸಿ, ಅದಕ್ಕೆ ಸಂಬಂಧಪಟ್ಟ ವಿಚಾರಣೆಯನ್ನು ಮಾಡಿದ ನಂತರದಲ್ಲಿ, ಬಹಳ ನೋವಿನ ಸಂಗತಿ ಎಂದರೆ, ಪ್ರಮುಖವಾದ ಆರೋಪಿಯಾದಂಥ ನ್ಯಾಚುರಲ್ ಎಕ್ಸ್‌ಪ್ಲೋಸಿವ್ ಕಾರ್ಪೊರೇಷನ್ನಿನ ಮಾಲೀಕರಾದಂಥ, ಮೈಸೂರು ನಗರದ ಕಾಂಗೆಸ್(ಐ)ನ ಜಂಟಿ ಕಾರ್ಯದರ್ಶಿಯೂ ಕೂಡ ಆದಂಥ ರಿಯಾಜುರ್ ರೆಹಮಾನ್ ಎನ್ನುವವರನ್ನು ಇವತ್ತಿನವರೆಗೂ ಬಂಧಿಸುವಂಥ ಯಾವುದೇ ಒಂದು ಪ್ರಯತ್ನವನ್ನು ಮಾಡಿಲ್ಲ. ಇವತ್ತು ಪೋಲೀಸಿನವರ ದಾಖಲೆ ಪ್ರಕಾರ, ಆತ ತಪ್ಪಿಸಿಕೊಂಡು ಹೋಗಿದ್ದಾನೆ ಎಂದು ಹೇಳಿದ್ದಾರೆ. ಆದರೆ, ಮೈಸೂರು ನಗರದಲ್ಲೇ ಇದ್ದರೂ ಕೂಡ, ಇವತ್ತಿನವರೆಗೆ ವಿಚಾರಣೆಯನ್ನು ಮಾಡಿಲ್ಲ. ಇನ್ನೊಂದು ವರದಿಯ ಪ್ರಕಾರ, ಈಗ ಬಂದಂಥ ಕುಟ್ಟಿ ಎಂಬುವರನ್ನು ವಿಚಾರಣೆ ಮಾಡಿದ ವಿಚಾರ ಪತ್ರಿಕೆಗಳಲ್ಲೂ ಬಂದಿದೆ. ಮೈಸೂರಿನಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು 2ನೇ ತಾರೀಖು ಬರುವಂಥ ಒಂದು ಸಂದರ್ಭ ಇತ್ತು. ಅವತ್ತಿನ ದಿವಸ ಮೈಸೂರಿನಲ್ಲಿ ಈ ಸ್ಫೋಟವನ್ನು ಮಾಡುವುದಕ್ಕೋಸ್ಕರ, ಮೈಸೂರಿನಲ್ಲಿ ಬಾಂಬನ್ನು ತಯಾರು ಮಾಡಲಾಗಿತ್ತುಎನ್ನುವಂಥ ವಿಚಾರವೂ ಕೂಡ ಪತ್ರಿಕೆಗಳಲ್ಲಿ ವಿಚಾರಣೆ ವಿಚಾರದಲ್ಲಿ ಬಂದಿದೆ. ಇದರಲ್ಲಿ ಪ್ರಮುಖ ಆರೋಪಿ ಯಾರು ಯಾರಿದ್ದಾರೆ, ದಸ್ತಗೀರ್ ಮತ್ತು ಅವ್ವರ್ ಎನ್ನುವವರೂ ತಪ್ಪಿಸಿಕೊಂಡಿದ್ದಾರೆ ಎಂಬ ದಾಖಲೆಯನ್ನು ತೋರಿಸುತ್ತಿದ್ದಾರೆ. ಇವತ್ತಿನವರೆಗೂ ಅಂತಹವರವನ್ನು ಬಂಧಿಸುವಂಥ ಪ್ರಯತ್ನ ಮಾಡಿಲ್ಲ. ಇನ್ನೊಂದು ಬಹಳ ನೋವಿನ ವಿಚಾರವೆಂದರೆ, ಮೈಸೂರಿನ ಹತ್ತಿರದಲ್ಲೇ ಇರುವಂಥ ಅಂಚ್ಯಾ ಗ್ರಾಮದಲ್ಲಿ ಒಂದು ಗೋಡೌನಿನ ಮೇಲೆ ಪೋಲೀಸರು ರೈಡ್ ಮಾಡಿದರು. ಅನಂತರ ಎರಡು ದಿವಸ ಆ ಗೋಡೌನ್‌ನ್ನು ಸೀಜ್ ಮಾಡಲಾಗಿತ್ತು. ಆದರೆ, 3ನೇ ದಿವಸದಿಂದ ಆ ಗೋಡೌನ್ ಕಾರ್ಯವನ್ನು ನಿರ್ವಹಿಸುತ್ತಿದೆ. ಆದರೆ, ಆ ಗೋಡೌನ್‌ನಲ್ಲಿ ಸೀಜ್ ಮಾಡಿದಂಥ ಸಂದರ್ಭದಲ್ಲಿ ಯಾವ ಯಾವ ಸ್ಫೋಟಕಗಳು ಸಿಕ್ಕಿತು ಎನ್ನುವುದರ ಬಗ್ಗೆಯಾಗಲೀ ಅಥವಾ ಆ ಮಾಲೀಕರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂಬುದಾಗಲೀ ಇಲ್ಲ. ಇನ್ನೊಂದು ಪ್ರಮುಖವಾದ ಕೊನೆಯ ವಿಚಾರ, ಈ ಐದು ಜನ ಯಾರು ಲೈಸೆನ್ಸ್‌ದಾರರು ಇದ್ದಾರೆ, ಅಂತಹವರಿಗೆ ಸರ್ಕಾರದ

ವತಿಯಿಂದ ಬೇರೆ ಬೇರೆ ಪದಾರ್ಥಗಳನ್ನು ಕೊಂಡುಕೊಂಡಂಥ 50 ಲಕ್ಷ ರೂಪಾಯಿಗಳ ಬಾಕಿಯನ್ನು ಸರ್ಕಾರವೇ ಕೊಡಬೇಕೆಂಬ ವಿಚಾರವನ್ನು ಲೈಸೆನ್ಸ್‌ದಾರರು ಇದ್ದಾರೆ, ಅಂತಹವರಿಂದ ಸರ್ಕಾರಕ್ಕೆ ಮತ್ತು ಸಮಾಜಕ್ಕೆ ಆಗುತ್ತಿರುವಂಥ ಅಘಾತದ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಎಂದು ತಮ್ಮ ಮೂಲಕ ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ):– ಮಾನ್ಯ ಅಧ್ಯಕ್ಷರೇ, ಮೈಸೂರು ಮಾರಕಾಸ್ತ್ರಗಳ ಊರಾಗಿದೆ. ಬಿ.ಜೆ.ಪಿ.ಯವರು ಅಲ್ಲಿರುವುದರಿಂದ ಗಲಾಟೆ ಮಾಡುತ್ತಾರೆ ಎಂಬ ವದಂತಿ ಇದೆ. ಆದರೆ, ನಾವು ಯಾರೂ ಕೂಡ ಆ ಕೆಲಸಕ್ಕೆ ಹೋಗುವುದಿಲ್ಲ. ಆದರೆ, ಆ ಮಾರಕಾಸ್ತ್ರಗಳನ್ನು ಮತ್ತು ಸಿಡಿ ಮದ್ದುಗಳನ್ನು ಇಟ್ಟುಕೊಂಡಿರುವವರ ಮೇಲೆ ಸರ್ಕಾರ ಸಂಪೂರ್ಣವಾಗಿ ಅವರ ಮೈಲಿ ಕೈ ಹಾಕುವುದಕ್ಕೆ ಹೋಗುತ್ತಾ ಇಲ್ಲ. ಏಕೆಂದರೆ, ನಮ್ಮ ಮೇಲೆ ಎಲ್ಲಿಹಾಕಿಬಿಡುತ್ತಾರೋ ಎಂದು ಭಯಪಟ್ಟುಕೊಂಡಿದೆ. ಇಂತಹ ಪರಿಸ್ಥಿತಿಯಾದರೆ, ಮೈಸೂರು ನಿಜವಾಗಿಯೂ ಕೂಡ, ತನ್ನದೇ ಆದಂಥ ಸಂಸ್ಕೃತಿಯನ್ನು ಇಟ್ಟುಕೊಂಡಿದೆ. ಅದು ಹೋಗಿ ಹೊರಗಿನಿಂದ ಬರತಕ್ಕ ಜನರು ನಿಂತುಹೋಗುತ್ತಾರೆ. ಅಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಅದಕ್ಕಾಗಿ, ದಯಮಾಡಿ ಇದನ್ನು ಮೈಸೂರಿನಲ್ಲಿ ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಕೊಯಮತ್ತೂರಿನಲ್ಲಿ ಒಂದು ಬಾಂಬ್ ಸ್ಫೋಟವಾಯಿತು, ಕರ್ನಾಟಕದಲ್ಲಿ ಒಂದುಕಡೆ ಆಯಿತು. ಬಿಜಾಪುರದಲ್ಲಿ ಬಂದಿದೆ, ಬೀದರ್‌ನಲ್ಲಿ ಬಂದಿದೆ, ಮೈಸೂರಿನಲ್ಲಿ ಬಂದಿದೆ ಎಂದು ಹೇಳುವಂತಹ ವದಂತಿಗಳು ಬಂದು, ಸರ್ಕಾರ ಇದರ ಬಗ್ಗೆ ಯಾವ ಯಾವ ಮಾಹಿತಿಗಳು ದೊರಕಿವೆ, ಆ ಮಾಹಿತಿಗಳೆಲ್ಲವನ್ನೂ ಕೂಡ ಸಮಗ್ರವಾಗಿ ಪರಿಶೀಲನೆ ಮಾಡಿ, ಇದರ ಬಗ್ಗೆ ತನಿಖೆಯನ್ನು ನಡೆಸುತ್ತಾ ಇದ್ದಾರೆ. ನಿಜ, ಈ ತರಹ ವಿರೋಧ ಮಾಡತಕ್ಕಂಥ ಸಮಾಜಘಾತುಕ ಶಕ್ತಿಗಳು ರಾಷ್ಟ್ರದ ಉದ್ದಗಲಕ್ಕೂ ಇರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ, ಇಲ್ಲಿ ಯಾರಿಗೋ ರಕ್ಷಣೆಯನ್ನು ಕೊಡತಕ್ಕಂತಾದ್ದು, ಅದು ಯಾರೋ ಕಾಂಗ್ರೆಸ್ ಜಾಯಿಂಟ್ ಸೆಕ್ರಟರಿ ಎಂದು, ಅವರ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲವೆಂದು ಹೇಳಿದ್ದಾರೆ. ಅವರು ಕಾಂಗ್ರೆಸ್ಸೇ ಆಗಲೀ, ಬಿ.ಜೆ.ಪಿ. ಆಗಲೀ ಅಥವಾ ಜನತಾ ದಳದವರೇ ಆಗಲೀ ಯಾರು ಇಂತಹ ಸಮಾಜಘಾತುಕ ಕಾರ್ಯಕ್ರಮಗಳಿಗೆ ಕೈ ಹಾಕುತ್ತಾರೆ ಅವರ ಬಗ್ಗೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಳ್ಳಬೇಕಾಗಿರುವುದು ಸರ್ಕಾರದ ಕರ್ತವ್ಯ. ತಾವು ವಿಳಂಬವಾಗುತ್ತಿದೆ ಎಂದು ಹೇಳುತ್ತೀರಿ. ನಾವು ಇದನ್ನು ಕಣ್ಣಿಟ್ಟು ನೋಡುತ್ತಿದ್ದೇವೆ. ಒಂದುಕಡೆ ಕ್ರೈಮ್ ಬ್ರಾಂಚ್‌ನವರು ಮಾಡುತ್ತಿದ್ದಾರೆ, ಇನ್ನೊಂದು ಕಡೆ ಕೇಂದ್ರಸರ್ಕಾರದ ತನಿಖಾ ದಳದವರು ಈ ಕೆಲಸ ಮಾಡುತ್ತಾ ಇದ್ದಾರೆ. ನಮ್ಮಲ್ಲಿರತಕ್ಕ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿನವರು ಈ ಕೆಲಸ ಮಾಡುತ್ತಿದ್ದಾರೆ. ಸಮಗ್ರವಾಗಿರತಕ್ಕ, ರಾಷ್ಟ್ರದ ಉದ್ದಗಲಕ್ಕೂ ಮಾಡುತ್ತಿರತಕ್ಕ ಈ ಮಾಫಿಯಾ ಗ್ಯಾಂಗ್ ಯಾವುದಿದೆ, ಇದರ ಬಗ್ಗೆ ಸರ್ಕಾರ ಕಣ್ಣಿಡುತ್ತಾ ಇದೆ. ಬಹುಶ: ಇದರ ಬಗ್ಗೆ ನಾವು ಕಾರ್ಯಕ್ರಮವನ್ನು ಕೈಗೊಳ್ಳುತ್ತಾ ಇದ್ದೇವೆ. ತಪ್ಪಿತಸ್ಥರು ಯಾರೇ ಇರಲಿ, ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ಕೈಗೊಳ್ಳುತ್ತೇವೆಂಬ ಮಾತನ್ನು ಆಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಪೋಮವಾರಪೇಟೆ):– ಕೊಯಮತ್ತೂರಿನಲ್ಲಿ ಬಾಂಬ್ ಸ್ಫೋಟ ಮಾಡಿದವರು ಸಿದ್ದಾಪುರದಲ್ಲಿದ್ದರು ಎಂದು ಪತ್ರಿಕೆಗಳಲ್ಲಿ ಬಂದಿದೆ. ಅಲ್ಲಿಯೂ ಕೂಡ ಅಧಿಕಾರಿಗಳು ಧಾಳಿ ಮಾಡಿದಾಗ ತಪ್ಪಿಸಿಕೊಂಡು ಹೋಗಿದ್ದಾರೆಂದೂ ಕೂಡ ಬಂದಿದೆ.

ಶ್ರೀ ಎಂ. ಸಿ. ನಾಣಯ್ಯ:– ಆ ದಿನ ನಾನು ಕೊಡಗಿನಲ್ಲಿಯೇ ಇದ್ದೆ, ತಾವು ಇದ್ದಿರಿ. ಕೊಡಗಿಗೂ ಯಾರೋ ಬಂದಿದ್ದಾರೆ ಎಂಬ ವದಂತಿಯನ್ನು ಹಬ್ಬಿಸತಕ್ಕಂತಾದ್ದು, ಬಹುಶ: ಅದರ ವಿಚಾರಣೆ ಬಂದಿದೆ. ಕೊಡಗಿನಲ್ಲಿ ಯಾರೂ ಬಂದಿಲ್ಲವೆಂಬುದು ಈಗ ಖಾತ್ರಿಯಾಗಿದೆ.